ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ವೈದ್ಯರ ಬಗ್ಗೆ

೨೪೧೨ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯರುಗಳ ಒಟ್ಟು ಸಂಖ್ಯೆ ಎಷ್ಟು, ಹಾಗೂ ಅವುಗಳಲ್ಲಿ ಮಹಿಳಾ ವೈದ್ಯರ ಒಟ್ಟು ಸಂಖ್ಯೆ ಎಷ್ಟು ?

ಆ) ನಗರ ಪ್ರಾಂತ್ಯದಲ್ಲಿ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಜನ ವೈದ್ಯರುಗಳ ಸೇವೆ ಸಲ್ಲಿಸಂತ್ತಿದ್ದಾರೆ. ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ಒಟ್ಟು ಸಂಖ್ಯೆ ೪೩೧

ಮಹಿಳೆಯರು ೪೭೧

ಆ) ೩೯೫

ಖಾಲಿ ಇರುವ ಸಂಖ್ಯೆ ೪೫೪

ಲೋಕಾಯುಕ್ತ ಇಲಾಖೆಯ ಸಾಧನೆ

೨೫೩೨ ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲೋಕಾಯುಕ್ತವು ಪ್ರಾರಂಭವಾದಾಗಿನಿಂದ ದಾಖಲಾಗಿರುವ ಮೊಕದ್ದಮೆಗಳೆಷ್ಟು?

ಆ) ಆ ಪೈಕಿ ಇತ್ಯರ್ಥವಾದ ಮೊಕದ್ದಮೆಗಳೆಷ್ಟು, (ವರ್ಷವಾರು ಮತ್ತು ಇಲಾಖಾವಾರು ವಿವರ ನೀಡುವುದು)

ಇ) ಲೋಕಾಯುಕ್ತ ತನಿಖೆಯ ನಂತರ ವಜಾ ಮಾಡಲ್ಪಟ್ಟ ಅಧಿಕಾರಿಗಳ ಸಂಖ್ಯೆ ಎಷ್ಟು ? (ಇಲಾಖಾವಾರು ಮತ್ತು ಅಧಿಕಾರಿಗಳ ವಿವರ ನೀಡುವುದು)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೭,೬೦೬

ಆ) ೭,೦೩೮

ವರ್ಷವಾರು ವಿವರಗಳು

ದೂರುಗಳ ವಿಭಾಗ :	೧೫-೧-೧೯೮೬ ರಿಂದ ೩೧-೩-೧೯೮೬		೬೪೪
	೧-೪-೧೯೮೬ ರಿಂದ ೩೧-೩-೧೯೮೭		೨೭೨೮
	೧-೪-೧೯೮೭ ರಿಂದ ೩೧-೩-೧೯೮೮		೨೮೮೨
	೧-೪-೧೯೮೮ ರಿಂದ ೯-೬-೧೯೮೮		೩೭೮
			೬೭೮೨
ಪೋಲೀಸ್ ವಿಭಾಗ :		೧೯೮೬	೩೭
		೧೯೮೭	೮೭
		೧೯೮೮	೬
			೧೩೦